ಜಿಲ್ಲಾ ಪಂಚಾಯ್ತಿಗಳವರು ಕಟ್ಟಡವನ್ನೂ ನಾವು ಕಟ್ಟಿಕೊಡುತ್ತೇವೆಂದು ಹೇಳುತ್ತಾರೆ. ಕೆಲವು ತಾಲ್ಲೂಕಿನಲ್ಲಿ ಕೇವಲ 2 ಲಕ್ಷ ರೂಪಾಯಿಗಳನ್ನು ಒದಗಿಸಿಕೊಟ್ಟಿದ್ದಾರೆ. ತಾವು ಡಾಕ್ಟರನ್ನೂ ಕೊಡಲಿಕ್ಕೆ ತಯಾರಿದ್ದೀರಿ. ಆದರೆ, ಆ ರೀತಿ ಸರ್ಕಾರದವರು ತೆಗೆದುಕೊಳ್ಳುವುದಕ್ಕೆ ತಯಾರಿಲ್ಲ. ಏಕೆಂದರೆ, ನಮ್ಮಲ್ಲಿ ರಿಸರ್ವೇಷನ್ ಪಾಲಿಸಿ ಇದೆ, ಮೆರಿಟ್ ಪಾಲಿಸಿ ಇದೆ. ಆ ಆಧಾರದ ಮೇಲೆ ನಾವು ನೇಮಕಾತಿ ಮಾಡಬೇಕಾಗುತ್ತದೆ. ಅದಕ್ಕಾಗಿ ಎಂತಹ ತಾಲ್ಲೂಕು ಎಂಬುದು ನಿರ್ದಿಷ್ಟ ಆಗಿಲ್ಲ. ರೋಣ ತಾಲ್ಲೂಕಿಗೆ ನಾವು ಹಣವನ್ನೂ ಕೊಡುತ್ತೇವೆ, ಕಟ್ಟಡವನ್ನೂ ಕೊಡುತ್ತೇವೆಂದು ಪಾಟೀಲರು ಹೇಳಿದರು. ಹಾಗಿದ್ದರೆ ರೋಣಕ್ಕೆ ಕೊಟ್ಟೇ ಕೊಡುತ್ತೇವೆ. ಅದೇ ರೀತಿ ತಮಗೂ ಕೂಡ ಕೊಡುತ್ತೇವೆ.

ರಾಜೀವ್ ಗಾಂಧಿ ಕುಡಿಯುವ ನೀರಿನ ಯೋಜನೆ

409 - ಶ್ರೀ ಜಸವರಾಜು ಹೆಚ್.ಸಿ. (ಪಿರಿಯಾಪಟ್ಟಣ) : ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ರಾಜೀವ್‌ಗಾಂಧಿ ಕುಡಿಯುವ ನೀರಿನ (Rajiv Gandhi Foundation Water Scheme ವತಿಯಿಂದ) ಯೋಜನೆ ಅನ್ವಯ ರಾಜ್ಯದ ಯಾವ ಯಾವ ಜಿಲ್ಲೆಗಳಲ್ಲಿ ಸೌಲಭ್ಯ ಕಲ್ಪಿಸಲಾಗಿದೆ ?*

ಆ) *ಈ ಯೋಜನೆ ಅನುಷ್ಠಾನಗೊಳಿಸುವಲ್ಲಿ ಸರ್ಕಾರ ಮಂದಗತಿಯಿಂದ ಸಾಗುತ್ತಿರುವುದು ನಿಜವೇ?*

ಇ) *ಗ್ರಾಮಸ್ಥರು ಶೇ.10ರಷ್ಟು ವಂತಿಗೆ ಕೊಡಲು ಮುಂದೆ ಬಂದಿರುವ ಕಡೆ ಕೆಲಸ ಪ್ರಾರಂಭಿಸಲು ಎಷ್ಟು ಸಮಯ ಬೇಕು?*

ಈ) *ಈ ಯೋಜನೆಯ ಅವಧಿ ಎಲ್ಲಿಯವರೆಗೆ ಇದೆ ?*

ಶ್ರೀ ಎಂ.ವೈ. ಘೋರ್ಪಡೆ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರು) :

ಅ) ಕೇಂದ್ರ ಸರ್ಕಾರದಿಂದ ಮಂಜೂರಾದ ಸಮುದಾಯ ಆಧಾರಿತ ಗ್ರಾಮೀಣ ನೀರು ಸರಬರಾಜು ಮತ್ತು ನೈರ್ಮಲ್ಯ ಕಾರ್ಯಕ್ರಮದಡಿ ರಾಜ್ಯದಲ್ಲಿ 3 ಜಿಲ್ಲೆಗಳು (1. ಮೈಸೂರು 2. ದಕ್ಷಿಣ ಕನ್ನಡ ಮತ್ತು 3. ಬಳ್ಳಾರಿ) ಆಯ್ಕೆಯಾಗಿದ್ದು, ಸದರಿ ಕಾರ್ಯಕ್ರಮದಡಿ ಕಾಮಗಾರಿಗಳನ್ನು ಇನ್ನೂ ಅನುಷ್ಠಾನಗೊಳಿಸಬೇಕಾಗಿದೆ.

ಆ) ಈ ಯೋಜನೆಯ ಉದ್ದೇಶ ಕೇವಲ ಕಾಮಗಾರಿಗಳನ್ನು ಅನುಷ್ಠಾನಗೊಳಿಸುವುದು ಮಾತ್ರವಾಗಿರದೆ, ಗ್ರಾಮೀಣ ನೀರು ಸರಬರಾಜು ಮತ್ತು ನೈರ್ಮಲ್ಯ ವಲಯಗಳಲ್ಲಿ ಸುಧಾರಣೆಗಳನ್ನು ತರುವುದಾಗಿರುತ್ತದೆ. ಆದ್ದರಿಂದ ಮೊದಲು ಗ್ರಾಮೀಣ ಜನರಲ್ಲಿ ಅರಿವು ಮೂಡಿಸಿ, ಅವರ ಭಾಗವಹಿಸುವಿಕೆಯೊಂದಿಗೆ ಕಾಮಗಾರಿಗಳನ್ನು ಅನುಷ್ಠಾನಗೊಳಿಸಬೇಕಾಗಿರುತ್ತದೆ. ಅದೇ ಪ್ರಕಾರ. ಈ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲು ಸರ್ಕಾರದಿಂದ ಕ್ರಮ ಕೈಗೊಳ್ಳಲಾಗುತ್ತಿದೆ.

ಇ) ಯೋಜನಾ ವೆಚ್ಚದ ಶೇಕಡ 10ರಷ್ಟು ವಂತಿಗೆ ನೀಡಲು ಮತ್ತು ಯೋಜನೆ ಪೂರ್ಣಗೊಂಡನಂತರ ನೀರು ಸರಬರಾಜು ಯೋಜನೆಯ ಪೂರ್ತಿ ನಿರ್ವಹಣಾ ವೆಚ್ಚವನ್ನು ಭರಿಸಲು ಮುಂದೆ ಬರುವ ಗ್ರಾಮಗಳಲ್ಲಿ "ಗ್ರಾಮ ನೀರು ಮತ್ತು ನೈರ್ಮಲ್ಯ ಸಮಿತಿ" ಗಳ ರಚನೆಯಾದನಂತರ ಗ್ರಾಮಸ್ಥರ ಬೇಡಿಕೆಗಳಿಗನುಗುಣವಾಗಿ ಯೋಜನಾ ವರದಿಗಳನ್ನು ತಯಾರಿಸಲಾಗುತ್ತದೆ. ಮತ್ತು ವಂತಿಗೆ ಸಂಗ್ರಹಣೆಯಾದ ನಂತರ ಯೋಜನೆಗಳಿಗೆ ಮಂಜೂರಾತಿ ನೀಡಿ ಕಾಮಗಾರಿಗಳನ್ನು ಕೈಗೆತ್ತಿಗೊಳ್ಳಲಾಗುತ್ತದೆ. ಈ ಪ್ರಕ್ರಿಯೆಗೆ ಕನಿಷ್ಟ 4-6 ತಿಂಗಳ ಅವಧಿ ಬೇಕಾಗುತ್ತದೆ.

ಈ) ಈ ಯೋಜನೆಯ ಅವಧಿಯು 2002-03ರವರೆಗೆ ಇರುತ್ತದೆ.

11.30 ಎ.ಎಂ

ಶ್ರೀ ಹೆಚ್.ಸಿ. ಬಸವರಾಜು : ಮಾನ್ಯ ಅಧ್ಯಕ್ಷರೇ, ಈ ಯೋಜನೆಗೆ ಮಂಜೂರಾತಿ ಯಾವಾಗ ಸಿಕ್ಕಿತು? ಅಲ್ಲಿಂದ ಇಲ್ಲಿಯವರಿಗೆ ಎಷ್ಟು ಕಾಲ ಆಗಿದೆ? ಸರ್ಕಾರ ಯಾವ ರೀತಿ ಕಾರ್ಯನಿರ್ವಹಿಸುತ್ತಿದೆ ಎನ್ನುವುದನ್ನು ಮಾನ್ಯ ಸಚಿವರು ತಿಳಿಸಬೇಕು. ಈ ಯೋಜನೆಯ ಅನುಷ್ಠಾನದ ಬಗ್ಗೆ ಸರ್ಕಾರ ಇದುವರೆಗೂ ಬಹಳ ನಿರ್ಲಿಪ್ತವಾದ ನೀತಿಯನ್ನು ಅಳವಡಿಸಿಕೊಂಡು ಬಂದಿದೆ. ಇದುವರೆಗೂ ಕೂಡ ಗ್ರಾಮೀಣ ಪ್ರದೇಶದಲ್ಲಿ ಈ ಯೋಜನೆಯ ಅನುಷ್ಠಾನದ ಬಗ್ಗೆ ಕಾರ್ಯಕ್ರಮವನ್ನು ಹಮ್ಮಿಕೊಂಡಿರುವ ಬಗ್ಗೆ ನಮಗೆ ಹೆಚ್ಚಿನ ಮಾಹಿತಿ ಇಲ್ಲ. ಈ ಯೋಜನೆಯನ್ನು ಅನುಷ್ಠಾನಕ್ಕೆ ತರಬೇಕಾದರೆ ಗ್ರಾಮಸ್ಥರು ಶೇಕಡ 10ರಷ್ಟು ವಂತಿಗೆಯನ್ನು ನೀಡಬೇಕೆಂದು ಇದೆ. ಆ ಶೇಕಡ 10ರಷ್ಟನ್ನು ಗ್ರಾಮ ಪಂಚಾಯತಿ ಅಥವಾ ತಾಲ್ಲೂಕು ಪಂಚಾಯತಿಯವರು ಆ ಹಣವನ್ನು ಕಟ್ಟಿಕೊಟ್ಟರೆ ಈ ಯೋಜನೆ ಅನುಷ್ಠಾನಕ್ಕೆ ತರುವುದಕ್ಕೆ ಸಾಧ್ಯವಾಗುತ್ತದೆ ಎನ್ನುವ ಬಗ್ಗೆ ಸರ್ಕಾರ ಏನು ಚಿಂತನೆ ಮಾಡಿದೆ ಎನ್ನುವುದನ್ನು ತಿಳಿಸಬೇಕು. ಈ ಯೋಜನೆ ಅನುಷ್ಠಾನದಲ್ಲಿ ಗ್ರಾಮ ನೈರ್ಮಲ್ಯ ಎಂದು ಇದೆ. ಶೌಚಾಲಯಗಳನ್ನು ನಿರ್ಮಿಸುವುದಕ್ಕೂ ಕೂಡ ಆ ಗ್ರಾಮದವರು ಶೇಕಡ 10 ರಷ್ಟನ್ನು ಕೊಟ್ಟರೆ ಶೌಚಾಲಯ ಮತ್ತು ಒಳಚರಂಡಿ ಇದಕ್ಕೆ ವಿಸ್ತರಿಸಲಾಗುವುದೇ ಎನ್ನುವುದನ್ನು ಮಾನ್ಯ ಮಂತ್ರಿಗಳಲ್ಲಿ ನಾನು ಕೇಳುವುದಕ್ಕೆ ಇಷ್ಟಪಡುತ್ತೇನೆ. ಈ ಯೋಜನೆಗೆ ಗ್ರಾಮಸ್ಥರು ವಂತಿಗೆಯನ್ನು ಕೊಟ್ಟ ಮೇಲೆ ಎಷ್ಟು ದಿನಗಳಲ್ಲಿ ಈ ಯೋಜನೆಯನ್ನು ಪೂರ್ಣಗೊಳಿಸುತ್ತೀರಿ ಎನ್ನುವುದನ್ನು ತಿಳಿಸಬೇಕೆಂದು ನಾನು ಮಾನ್ಯ ಮಂತ್ರಿಗಳಲ್ಲಿ ವಿನಂತಿಸಿಕೊಳ್ಳುತ್ತೇನೆ.

ಶ್ರೀ ಎಂ.ವೈ. ಘೋರ್ಪಡೆ : ಮಾನ್ಯ ಅಧ್ಯಕ್ಷರೆ, ಹೊಸದಾಗಿ ನಾವು ಮೂರು ಜಿಲ್ಲೆಗಳಲ್ಲಿ ಈಗಾಗಲೇ ಈ ಯೋಜನೆಯನ್ನು ಮಂಜೂರು ಮಾಡಿದ್ದೇವೆ. ಈ ಮೂರು ಜಿಲ್ಲೆಗಳಲ್ಲಿ ಮೂರು ವರ್ಷಗಳಲ್ಲಿ ಕೆಲಸ ಪೂರೈಸಬೇಕೆಂದು ಇದೆ. ಆ ಮೂರು ಜಿಲ್ಲೆಗಳು ಯಾವುವೆಂದರೆ ಮೈಸೂರು, ದಕ್ಷಿಣ ಕನ್ನಡ ಜಿಲ್ಲೆ ಮತ್ತು ಬಳ್ಳಾರಿ. ಈ ಮೂರು ಜಿಲ್ಲೆಗಳಿಗೆ ಒಂದೊಂದು ಜಿಲ್ಲೆಗೆ 40 ಕೋಟಿ ರೂಪಾಯಿಗಳನ್ನು ಕೇಂದ್ರ ಸರ್ಕಾರದವರು ಮಂಜೂರು ಮಾಡಿದ್ದಾರೆ. ಒಳಚರಂಡಿ ವ್ಯವಸ್ಥೆಗೆ ಮೈಸೂರು ಜಿಲ್ಲೆಗೆ 11 ಕೋಟಿ ರೂಪಾಯಿಗಳು, ದಕ್ಷಿಣ ಕನ್ನಡ ಜಿಲ್ಲೆಗೆ 6.38 ಕೋಟಿ ರೂಪಾಯಿಗಳು, ಬಳ್ಳಾರಿ ಜಿಲ್ಲೆಗೆ 10 ಕೋಟಿ ರೂಪಾಯಿಗಳು, ಇದು ಪ್ರಾಯೋಗಿಕವಾಗಿ ಒಂದು ಹೊಸ ಧಾಟಿಯಲ್ಲಿ ಈ ಕಾರ್ಯಕ್ರಮ ನಡೆಯಬೇಕೆನ್ನುವುದು ನಮ್ಮ ಉದ್ದೇಶ. ಮತ್ತೆ ಹೊಸ ದಾಟಿಯನ್ನು ಏನು ಕೇಂದ್ರ

ಸರ್ಕಾರದವರು ಬಯಸುತ್ತಿದ್ದಾರೆ, ಇದರಲ್ಲಿ ಜನರು ಫುಲ್ ಪಾರ್ಟಿಸಿಪೇಶನ್ ಇರಬೇಕು, ಫುಲ್ ಪಾರ್ಟಿಸಿಪೇಶನ್ ಅಂದರೆ ಬರೀ ಹಣದ ದೃಷ್ಟಿಯಿಂದ ಮಾತ್ರ ಅಲ್ಲ, ಈ ಯೋಜನೆ ರೂಪಿಸುವುದರಲ್ಲಿ ಕೂಡ ಅವರ ಪಾರ್ಟಿಸಿಪೇಶನ್ ಇರಬೇಕು. ಈಗ ಈ ಯೋಜನೆಯನ್ನು ಯಾವ ತರಹ ಮಾಡಬೇಕು? ಇದರ ಬಗ್ಗೆ ಚರ್ಚೆ ನಡೆದು ಅವರ ಅವಶ್ಯಕತೆ ಆಧಾರದ ಮೇಲೆ ಹೊಸ ಕಾರ್ಯಕ್ರಮ ನಡೆಯಬೇಕು. ಇದನ್ನು ತಕ್ಷಣ ಒಂದೇ ತಿಂಗಳಲ್ಲಿ ಮಾಡುವ ಕಾರ್ಯಕ್ರಮ ಅಲ್ಲ. ಈ ಕಾರ್ಯಕ್ರಮ ಪ್ರಾರಂಭ ಮಾಡುವುದಕ್ಕಿಂತ ಮುಂಚೆ ಸಾಕಷ್ಟು ಪ್ರಚಾರ ಆಗಬೇಕು, ಆ ಹಳ್ಳಿಯಲ್ಲಿ, ಮತ್ತೆ ಜನತೆಯಿಂದ ಕಾಂಟ್ರಿಬ್ಯೂಷನ್ ಬರಬೇಕೆಂದು ಇದೆ. ಫಿಕ್ಸ್ಡ್ ಎಕ್ಸ್‌ಪೆಂಡಿಚರ್ 10 ಪರ್ಸೆಂಟ್ ಅವರು ಕೊಡಬೇಕು. ಅವರು 10 ಪರ್ಸೆಂಟ್ ತಂದು ಕೊಟ್ಟರೆ ಕೆಲಸ ನಡೆಯುತ್ತದೆ ಎಂದು ಅಲ್ಲ. ಆ 10 ಪರ್ಸೆಂಟ್‌ನಲ್ಲಿ ಅರ್ಧ ಹಣವಾದರೂ ಅವರು ಜೋಡಿಸಿದರೆ ಅವರಿಗೆ ಈ ಕಾರ್ಯಕ್ರಮದಲ್ಲಿ ಮನಸ್ಸು ಇದೆ, ಆಸಕ್ತಿ ಇದೆ ಎನ್ನುವುದನ್ನು ನಾವು ತಿಳಿದುಕೊಳ್ಳುವುದಕ್ಕೆ ಸಾಧ್ಯವಾಗುತ್ತದೆ. ಮತ್ತೆ ಒಳಚರಂಡಿ ವ್ಯವಸ್ಥೆಗೆ ಸರಾಸರಿ ಒಂದು 5 ಪರ್ಸೆಂಟ್ ಮೈಂಟನೆನ್ಸ್ ಅವರೇ ಮಾಡಬೇಕೆಂದು ಇದೆ. ವರ್ಲ್ಡ್ ಬ್ಯಾಂಕ್‌ನವರು ಸಹ ಆದೇ ಮಾತನ್ನು ಹೇಳುತ್ತಿದ್ದಾರೆ. ಕೇಂದ್ರ ಸರ್ಕಾರದವರು ಆದೇ ಮಾತನ್ನು ಹೇಳುತ್ತಿದ್ದಾರೆ. ಇನ್ನು ಮುಂದೆ ಇಂತಹ ಕಾರ್ಯಕ್ರಮಗಳನ್ನು ಮಾಡುವಾಗ ಕೋಟ್ಯಾಂತರ ರೂಪಾಯಿಗಳನ್ನು ಖರ್ಚು ಮಾಡಿ ಮಾಡಬೇಕಾದರೆ ಅವರ ಕಾಂಟ್ರಿಬ್ಯೂಶನ್ ಇರಲೇಬೇಕು, ಎನ್ನುವ ಮಾತನ್ನು ಹೇಳುತ್ತಿದ್ದಾರೆ. ತಮ್ಮ ತಮ್ಮ ಹಳ್ಳಿಯಲ್ಲಿ ಯಾರು ಕಾಂಟ್ರಿಬ್ಯೂಶನ್ ಕೊಡುವುದಕ್ಕೆ ಮುಂದೆ ಬರುತ್ತಾರೆ ಮತ್ತು ಒಳಚರಂಡಿ ವ್ಯವಸ್ಥೆ ಮೈಂಟೆನೆನ್ಸ್ ಮಾಡುವುದಕ್ಕೆ ಒಪ್ಪಿಕೊಳ್ಳುತ್ತಾರೆ ಅಂತಹ ಕಡೆ ನಾವು ಆಧ್ಯತೆಯನ್ನು ಕೊಡಲಿಕ್ಕೆ ಸಾಧ್ಯವಾಗುತ್ತದೆ. ಇದು ಬಹಳ ಮುಖ್ಯವಾದ ಕಾರ್ಯಕ್ರಮ ಒಂದೊಂದು ಜಿಲ್ಲೆಗೆ 40 ಕೋಟಿ ರೂಪಾಯಿಗಳನ್ನು ಕೊಡುತ್ತಾರೆ. ಇದರಲ್ಲಿ ಜನ ಆಸಕ್ತಿ ವಹಿಸಿ ಮುಂದೆ ಬರುವ ಮೂರು ವರ್ಷಗಳಲ್ಲಿ ತಮಗೆ ಬೇಕಾದ ರೀತಿಯಲ್ಲಿ ಅವರು ಮಾಡಬೇಕು ಎನ್ನುವುದೇ ಇದರ ಉದ್ದೇಶವಾಗಿದೆ. ದಯವಿಟ್ಟು ಇದರ ಬಗ್ಗೆ ತಾವು ಸಹ ಆಸಕ್ತಿ ವಹಿಸಬೇಕು.

ಶ್ರೀ ಹೆಚ್.ಸಿ. ಬಸವರಾಜು : ಮಾನ್ಯ ಅಧ್ಯಕ್ಷರೆ, ಮಾನ್ಯ ಮಂತ್ರಿಗಳು ನಾನು ಕೇಳಿದಂತಹ ಪ್ರಶ್ನೆಗೆ ಸ್ಪಷ್ಟಣೆ ಕೊಡಬೇಕು. ಶೌಚಾಲಯಗಳು ಮತ್ತು ಒಳಚರಂಡಿ ಮತ್ತು ಗ್ರಾಮ ನೈರ್ಮಲ್ಯಗಳ ಬಗ್ಗೆ 10 ಪರ್ಸೆಂಟ್‌ನಲ್ಲಿ ಕೆಲಸ ಪ್ರಾರಂಭ ಮಾಡಬಹುದೇ ಎನ್ನುವುದು ನಾನು ಕೇಳಿದ ಪ್ರಶ್ನೆ. ಮಾನ್ಯ ಮಂತ್ರಿಗಳು ಹೇಳಿದರು ಶೇಕಡ 10 ರಷ್ಟು ಕೊಡದಿದ್ದರೂ ಶೇಕಡ 5 ರಷ್ಟು ಕೊಟ್ಟರೂ ಸಾಕು ನಾವು ಕೆಲಸ ಪ್ರಾರಂಭ ಮಾಡುತ್ತೇವೆಂದು ಹೇಳಿದರು ಅದಕ್ಕೆ ನಾನು ಅವರಿಗೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. 5 ಪರ್ಸೆಂಟ್‌ನಷ್ಟು ಹಣ ಕೊಡಲು ಒಂದೊಂದು ತಾಲ್ಲೂಕಿನಲ್ಲಿ ಬೇಕಾದಷ್ಟು ಹಳ್ಳಿ ಜನ ಹಣ ಕೊಡಲು ಮುಂದೆ ಬರುತ್ತಿದ್ದಾರೆ. ಸರ್ಕಾರ ಬಹಳ ಮಂದಗತಿಯಿಂದ ಹೋಗುತ್ತಿದೆ. ಈಗಾಗಲೇ ಮಂಜೂರಾಗಿ 6 ತಿಂಗಳಾದರೂ ಕೂಡ ಗ್ರಾಮ ನೈರ್ಮಲ್ಯದ ಬಗ್ಗೆ ತರಬೇತಿಯನ್ನು ಸಹ ಕೊಟ್ಟಿಲ್ಲ. ಇದರ ಬಗ್ಗೆ ಸರ್ಕಾರ ಹೆಚ್ಚಿನ ಕಾಳಜಿ ವಹಿಸುತ್ತಿಲ್ಲ. ಇದನ್ನು ನಾನು ಸರ್ಕಾರದ ಗಮನಕ್ಕೆ ತರುವುದಕ್ಕೆ ಇಚ್ಛಿಪಡುತ್ತೇನೆ. ಈ ಕೂಡಲೇ ತಾವು ಕ್ರಮ ಕೈಗೊಳ್ಳಬೇಕು. ಕೇಂದ್ರ ಸರ್ಕಾರದಿಂದ ಬಂದಿರುವ ಹಣ ಜಿಲ್ಲಾಪರಿಷತ್ತಿನಲ್ಲಿ ಕೊಳೆಯುತ್ತಾ ಕುಳಿತಿರುವಾಗ ಈ ಹಣವನ್ನು ನಾವು ಸದುಪಯೋಗ ಪಡಿಸಿಕೊಳ್ಳದಿದ್ದರೆ

ಈ ಹಣ ದುರುಪಯೋಗವಾಗುತ್ತದೆಂದು ನಾವು ಪರಿಗಣಿಸಬೇಕಾಗುತ್ತದೆ. ಇದಕ್ಕೆ ಸರ್ಕಾರವೇ ಹೊಣೆಗಾರಿಕೆಯಾಗುತ್ತದೆ. ಆದ್ದರಿಂದ, ದಯಮಾಡಿ ಇದರ ಬಗ್ಗೆ ಹೆಚ್ಚಿನ ಕಳಕಳಿಯನ್ನು ಇಟ್ಟು ಟೈಮ್ ಬಾಂಡ್ ಪ್ರೋಗ್ರಾಂ ಹಾಕಿಕೊಂಡು ಕೆಲಸ ಮಾಡಬೇಕೆಂದು ನಾನು ಮಾನ್ಯ ಸಚಿವರಲ್ಲಿ ವಿನಂತಿಸಿಕೊಳ್ಳುತ್ತೇನೆ.

ಶ್ರೀ ಎಂ.ವೈ. ಘೋರ್ಪಡೆ : ಮಾನ್ಯ ಅಧ್ಯಕ್ಷರೆ, ಹಣ ಈಗಾಗಲೇ ಬಂದಿದೆ. ಈ ಹಣ ಖರ್ಚು ಮಾಡುವುದರಲ್ಲಿ ಏನೂ ತೊಂದರೆ ಇಲ್ಲ. ಬಳ್ಳಾರಿ ಜಿಲ್ಲೆಯಲ್ಲಿ ನಾವು ಏನು ಹೇಳಿದ್ದೇವೆ ಅಂದರೆ ಪ್ರತಿಯೊಂದು ಗ್ರಾಮಸಭೆಗೂ ಸಂಬಂಧಪಟ್ಟ ಅಧಿಕಾರಸ್ಥರು ಮತ್ತು ಅವರ ಪ್ರತಿನಿಧಿಗಳು ಹೋಗಿ ಅಲ್ಲಿ ಯಾವ ತರಹದ ಕಾರ್ಯಕ್ರಮ ಮುಂದುವರಿಸಬೇಕು, ಯಾವ ಗ್ರಾಮದಲ್ಲಿ ಏನು ಕೆಲಸ ಆಗಿದೆ ಯಾವ ಕೆಲಸ ಆಗಬೇಕು, ಇನ್ನು ಬರುವ ಮೂರು ವರ್ಷಗಳಲ್ಲಿ ಏನು ಕೆಲಸ ಆಗಬೇಕಾಗಿದೆ ಸಮಗ್ರವಾದ ಚಿಂತನೆ ಮಾಡಿ ಒಂದು ವರದಿ ತಯಾರು ಮಾಡಿ ಒಂದು ವಾಟರ್ ರಿಪೋರ್ಟ್ ಆ ಜಿಲ್ಲೆಗೆ ತಯಾರು ಮಾಡಬೇಕು. ಆ ಕೆಲಸ ನಡೆದಿದೆ ಈಗ. ತಮ್ಮ ಜಿಲ್ಲೆಯಲ್ಲಿ ಆ ಕೆಲಸ ನಡೆಯದಿದ್ದರೆ ಸಂಬಂಧಪಟ್ಟ ಜಿಲ್ಲಾ ಅಧ್ಯಕ್ಷರಿಗೆ ಸಮಿತಿಯವರಿಗೆ ಹೇಳಿ ಪ್ರತಿಯೊಂದು ಗ್ರಾಮಕ್ಕೂ ಹೋಗಿ ಮೂರು ವರ್ಷಗಳಲ್ಲಿ ಏನಾಗಬೇಕು ಎನ್ನುವುದನ್ನು ಪಟ್ಟಿ ಮಾಡಿಕೊಂಡು ಬರಲಿ ಅದನ್ನು ಅನುಷ್ಠಾನ ಮಾಡುವುದಕ್ಕೆ ಈಗಾಗಲೇ ದುಡ್ಡು ಕೊಟ್ಟಿದ್ದೇವೆ. ಸಣ್ಣ ಸಣ್ಣ ಶೌಚಾಲಯಗಳನ್ನು ಮಾಡುವುದಕ್ಕೆ ನಾವು ಕೇಳಬೇಕಾಗಿಲ್ಲ. ನೀವೇ ಮಾಡುವುದಕ್ಕೆ ಅವಕಾಶ ಇದೆ. ನಾವೇನು ನಿಮ್ಮ ಕೈ ಕಟ್ಟಿ ಹಾಕಲಿಲ್ಲ. ಇಂಥಾದ್ದೆ ಮಾಡಬೇಕು ಅಂಥಾದ್ದೆ ಮಾಡಬೇಕೆಂದು. ನಾವು ಉದ್ದೇಶಪೂರ್ವಕವಾಗಿಯೇ ಹೇಳಿದ್ದೇವೆ, ಜನರಿಂದ ತಯಾರಾದ ಒಂದು ಕಾರ್ಯಕ್ರಮ ನಡೆಯಬೇಕು, ಇದು ಒಂದು ಪ್ರಾಯೋಗಿಕವಾಗಿ ಮಾಡುವಂತಹ ಕಾರ್ಯಕ್ರಮ. ಈ ಕಾರ್ಯಕ್ರಮ ಯಶಸ್ವಿಯಾದರೆ ಬಹಳಷ್ಟು ಜನರಿಗೆ ಸಮಾಧಾನವಾಗುತ್ತದೆ ಇದನ್ನು ತಾವು ಮಾಡಬೇಕಾದರೆ ಪ್ರತಿಯೊಂದು ಗ್ರಾಮ ಪಂಚಾಯತಿಗೂ ಹೋಗದೆ ಅವರನ್ನು ಕೇಳದೆ ಯಾವುದೋ ಒಂದು ಕಾರ್ಯಕ್ರಮ ಮಾಡುವುದಕ್ಕೆ ಆಗುವುದಿಲ್ಲ. ಇದು ಜಿಲ್ಲಾ ಪಂಚಾಯತಿ ಅಡಿಯಲ್ಲಿ ಆಗುವಂತಹ ಕಾರ್ಯಕ್ರಮ. ಕೇಂದ್ರ ಸರ್ಕಾರದಿಂದ ಹಣ ಬಂದರೂ ಕೂಡ ಈ ಕಾರ್ಯಕ್ರಮವನ್ನು ಅನುಷ್ಠಾನ ಮಾಡುವವರು ಯಾರು? ಆ ಜಿಲ್ಲೆಯ ಜಿಲ್ಲಾ ಪಂಚಾಯತಿಯವರು. ಆ ಜಿಲ್ಲೆಯ ಜಿಲ್ಲಾ ಪ್ರತಿನಿಧಿಗಳು ಮತ್ತು ಶಾಸಕರು ಮತ್ತು ಆ ವಿಷಯದಲ್ಲಿ ಯಾರಿಗೆ ಆಸಕ್ತಿ ಇದೆ ಅವರು ದಯವಿಟ್ಟು ಪ್ರತಿಯೊಂದು ಗ್ರಾಮಕ್ಕೂ ಹೋಗಿ ಅಲ್ಲ ಅಂತಹ ಒಂದು ಕೆಲಸ ಪ್ರಾರಂಭ ಮಾಡುವುದರಲ್ಲಿ ಏನೇನು ತೊಂದರೆ ಇಲ್ಲ.

ಶ್ರೀ ಜಗದೀಶ್ ಶೆಟ್ಟರ್ : ಮಾನ್ಯ ಅಧ್ಯಕ್ಷರೆ, ಇದು ಬಹಳ ಮಹತ್ವದ ಯೋಜನೆ. ಕೇಂದ್ರ ಸರ್ಕಾರದಿಂದ ಹಣ ಬರುತ್ತಾ ಇರುವಂಥಾದ್ದು. ಈ ಬಗ್ಗೆ ಮಾನ್ಯ ಗ್ರಾಮೀಣಾಭಿವೃದ್ಧಿ ಸಚಿವರು ಹೇಳಿದರು 10 ಪರ್ಸೆಂಟ್ ಕಾಂಟ್ರಿಬ್ಯೂಶನ್ ಏನು ಹಳ್ಳಿ ಜನರಿಂದ ಬರುತ್ತದೆ ಇದರಿಂದ ಹಳ್ಳಿಯ ಜನರ ಇನ್‌ವಾಲ್ವ್‌ಮೆಂಟ್ ಸಹ ಇದರಲ್ಲಿ ಬರುತ್ತದೆ. ಈ ಬಗ್ಗೆ ಹೆಚ್ಚು ಪ್ರಚಾರವಾಗುವಂಥಾದ್ದು ಆಗಬೇಕು. ಜಿಲ್ಲಾ ಪಂಚಾಯತಿ ಅಧಿಕಾರಿಗಳು ಹೆಚ್ಚು ಪ್ರಚಾರ ಮಾಡಬೇಕು. ಇಲ್ಲದಿದ್ದರೆ ಪ್ರೊಸೀಜರ್‌ನಲ್ಲಿ

ಹೆಚ್ಚು ಪೆಂಡಿಂಗ್ ಬೀಳುತ್ತದೆ. ಜಿಲ್ಲಾ ಪಂಚಾಯತಿ ಸದಸ್ಯರು ಇರಬಹುದು ಅಥವಾ ಇತರೆ ಜನಪ್ರತಿನಿಧಿಗಳು ಇರಬಹುದು, ಹಳ್ಳಿಯಲ್ಲಿರುವಂತಹ ಪ್ರಮುಖರು ಇರಬಹುದು, ಇವರಿಗೆ ಅಲ್ಲಿರುವ ಅಧಿಕಾರಿಗಳು ಸರಿಯಾದ ಒಂದು ರೆಸ್‌ಪಾನ್ಸ್ ಕೊಡದಿದ್ದರೆ ಈ ಕಾರ್ಯಕ್ರಮ ಸರಿಯಾಗಿ ಇಂಪ್ಲಿಮೆಂಟ್ ಆಗುವುದಿಲ್ಲ. ತಾವು ಎಲ್ಲರಿಗೂ ತಿಳಿಸುವಂಥಾದ್ದು ಆಗಬೇಕು. ಅಧಿಕಾರಿಗಳು ಹೆಚ್ಚು ಆಸಕ್ತಿ ತೆಗೆದುಕೊಂಡು ಹೆಚ್ಚು ಪ್ರಚಾರ ಮಾಡಿ ಅಲ್ಲಿನ ಗ್ರಾಮಸ್ಥರಿಗೆ ಹೆಚ್ಚಿನ ತಿಳುವಳಿಕೆ ಕೊಟ್ಟು ಮಾಡಿದರೆ ಪ್ರಯೋಜನವಾಗುತ್ತದೆ. ಇವತ್ತು ಹಳ್ಳಿಗಳಲ್ಲಿ ಕುಡಿಯುವ ನೀರು ಸಿಗುತ್ತಿಲ್ಲ. ಗ್ರಾಮಗಳಲ್ಲಿ ನೈರ್ಮಲ್ಯ ವ್ಯವಸ್ಥೆ ಹೇಗಿದೆ ಎನ್ನುವುದನ್ನು ನಾವು ನೋಡುತ್ತಿದ್ದೇವೆ. ಹೆಚ್ಚು ಪ್ರಚಾರ ಮತ್ತು ಹೆಚ್ಚು ಇನ್‌ವಾಲ್ವ್‌ಮೆಂಟ್ ಜನರಿಗೆ ಕೊಡುವಂಥಾದ್ದು ಅಧಿಕಾರಿಗಳು ಮಾಡಬೇಕು. ಇದಕ್ಕೆ ಸರ್ಕಾರ ಹೆಚ್ಚು ಒತ್ತು ಕೊಡಬೇಕೆನ್ನುವುದು ನನ್ನ ಅಭಿಪ್ರಾಯ.

ಶ್ರೀ ಎಂ.ವೈ. ಘೋರ್ಪಡೆ : ಮಾನ್ಯ ಅಧ್ಯಕ್ಷರೆ, ಬರೀ ಅಧಿಕಾರಸ್ಥರೇ ಮಾಡಬೇಕು ಎನ್ನುವ ಮಾತನ್ನು ನಾನು ಒಪ್ಪುವುದಿಲ್ಲ. ನೀವು, ಸಿ.ಇ.ಒ, ಮತ್ತು ಸಂಬಂಧಪಟ್ಟ ಜಿಲ್ಲಾ ಪಂಚಾಯತಿ ಸದಸ್ಯರು, ಅಧ್ಯಕ್ಷರು, ಅವಶ್ಯಕತೆ ಇದ್ದರೆ ಶಾಸಕರು ಕೂಡ ಒಂದೂಂದು ಗ್ರಾಮ ಪಂಚಾಯತಿಗೆ ಭೇಟಿ ಕೊಟ್ಟು ಇಷ್ಟು ವರ್ಷಗಳಿಂದ ಏನಾಗಿದೆ, ಇನ್ನು ಮೂರು ವರ್ಷಗಳಲ್ಲಿ ಏನಾಗಬೇಕಾಗಿದೆ ಎನ್ನುವ ಒಂದು ಚಿತ್ರ ಕಂಡುಕೊಂಡರೆ ಆಗ ಜನರಿಗೆ ಏನು ಅವಶ್ಯಕತೆ ಇದೆ ಅದನ್ನು ಅನುಷ್ಠಾನ ಮಾಡುವುದಕ್ಕೆ ಹಣದ ಅಭಾವ ಇಲ್ಲ. ನಾವು ಪತ್ರಿಕೆಗಳಲ್ಲಿ ಪ್ರಚಾರ ಮಾಡಿದರೆ ಅದು ಸರಿಯಲ್ಲ. ನಾವು ನೇರವಾಗಿ ಹೋಗಬೇಕು. ನಾನು ನನ್ನ ಜಿಲ್ಲೆಯಲ್ಲಿ ಅದನ್ನು ಹೇಳಿದ್ದೇನೆ. ನಾನು ಸಹ ಆದಷ್ಟು ಗ್ರಾಮಗಳಿಗೆ ಹೋಗಿ ಇದರ ಬಗ್ಗೆ ಪ್ರಚಾರ ಮಾಡಿದ್ದೇನೆ. ಇದರಲ್ಲಿ ಹೊಸತನ ಇರುವುದು ಮೂರು. 10 ಪರ್ಸೆಂಟ್ ಫಿಕ್ಸ್ಡ್ ಎಕ್ಸ್‌ಪೆಂಡಿಚರ್ ಅವರು ಇದನ್ನು ಹಣದ ಮೂಲಕವಾದರೂ ಕೊಡಲಿ ಅಥವಾ ಲೇಬರ್ ಮೂಲಕವಾದರೂ ಕೊಡಲಿ. ಈಗ ಮಿನಿಮಮ್ ವೇಜಸ್ 50 ರೂಪಾಯಿ ಇದೆ ಎಂದು ಒಂದು ಅಂದಾಜು ಇಟ್ಟುಕೊಳ್ಳಿ. ಅವರು ಒಂದು ದಿನ ಕೂಲಿ ಅಥವಾ ಮ್ಯಾನುಯಲ್ ವರ್ಕ್ ಮಾಡಿದರೆ ಅವರು ಈ ಕಾರ್ಯಕ್ರಮಕ್ಕೆ ಐವತ್ತು ರೂಪಾಯಿಗಳನ್ನು ಕೊಟ್ಟಿದ್ದಾರೆ ಎಂದು ಬರೆದುಕೊಳ್ಳುವುದಕ್ಕೆ ಅವಕಾಶವಿದೆ. ಏಕೆಂದರೆ ಬಡವರಿಗೆ ಈ ಕಾರ್ಯಕ್ರಮವನ್ನು ಕೊಡುವುದಕ್ಕೆ ಆಗಲಿಕ್ಕಿರಲಿಕ್ಕಿಲ್ಲ. ಅದರೆ ಅವರ ಓಣಿಯಲ್ಲಿ ಯಾವ ಕೆಲಸ ನಡೆಯುತ್ತಿದೆ ಆವಾಗ ಅವರುಗಳು ಅದರಲ್ಲಿ ಭಾಗವಹಿಸಬಹುದಲ್ಲವೆ? ಹೀಗೆ ಎಷ್ಟೋ ಕಡೆಗಳಲ್ಲಿ ಮಾಡುತ್ತಿದ್ದಾರೆ. ಮಾಡಿದರೆ ನಾವು ಅವರುಗಳಿಗೆ ಕ್ರೆಡಿಟ್ ಕೊಡಬಹುದು. ದಿನಕ್ಕೆ ಐವತ್ತು ರೂಪಾಯಿಗಳ ಲೆಕ್ಕದಲ್ಲಿ ಕೊಡಬಹುದೆಂದು ಒಂದು ಅಂದಾಜಿನ ಪ್ರಕಾರ ಹೇಳುತ್ತಿದ್ದೇನೆ. ಇಲ್ಲಿ ನಮ್ಮ ಉದ್ದೇಶವೇನೆಂದರೆ ಎಲ್ಲರೂ ಇದು ನಮ್ಮ ಕಾರ್ಯಕ್ರಮವೆಂದು ತಿಳಿದು ಭಾಗವಹಿಸಬೇಕು. ಎಲ್ಲರೂ ಸೇರಿ ಈ ಕೆಲಸವನ್ನು ಮಾಡಿಸಬೇಕು. ಇಲ್ಲವಾದರೆ ಸ್ವಚ್ಛವಾದ ಕೆಲಸವು ಆಗುವುದಿಲ್ಲ. ಕಳಪೆ ಕೆಲಸಗಳು ಆಗುತ್ತವೆ. ಹೀಗೆ ಮಾಡದೇ ಅನಂತರ ಅದು ಆಗಿಲ್ಲ, ಇದು ಆಗಿಲ್ಲವೆಂದು ಹೇಳುವುದರಲ್ಲಿ ಏನು ಅರ್ಥವಿದೆ? ಈಗ ನಲವತ್ತು ಕೋಟಿ ರೂಪಾಯಿಗಳ ಹಣವನ್ನು ಜಿಲ್ಲೆಗೆ ಕೊಟ್ಟಿದ್ದಾರೆ ಇದೊಂದು ಅಪೂರ್ವವಾದ ಅವಕಾಶ ಎಂದು ಹೇಳುತ್ತೇನೆ ಹಿಂದೆ ಯಾವ ಕಾಲದಲ್ಲೂ ಇಷ್ಟು ಹಣವನ್ನು ಕೊಟ್ಟಿಲ್ಲ. ಇದು ಸದುಪಯೋಗವಾದರೆ ಸಂಪೂರ್ಣವಾಗಿ ಆ ಮೂರು ಜಿಲ್ಲೆಗಳಲ್ಲಿ ನೀರಿನ ಸಮಸ್ಯೆಯನ್ನು ಬಗೆಹರಿಸಬಹುದು.

ಅಧ್ಯಕ್ಷರು : ಇದು ಕೊನೆಯ ಪ್ರಶ್ನೆ, ಒಂದೊಂದು ಪ್ರಶ್ನೆಗೆ 15 ನಿಮಿಷಗಳಷ್ಟು ಕಾಲಕಳೆದರೆ ಹೇಗೆ ಎಲ್ಲಾ ಪ್ರಶ್ನೆಗಳನ್ನು ಮುಗಿಸುವುದಕ್ಕೆ ಸಾಧ್ಯವಾದೀತು ? ಹೀಗಾದರೆ ಹೇಗೆ ಮ್ಯಾನೇಜ್ ಮಾಡುವುದು ಎಂದು ನೀವೇ ಹೇಳಿ? ನೀವು ಮ್ಯಾನೇಜ್ ಮಾಡುತ್ತೀರಾ? ಒಂದು ಪ್ರಶ್ನೆಗೆ 15 ನಿಮಿಷಗಳನ್ನು ಕಳೆದರೆ ಕೇವಲ ನಾಲ್ಕು ಪ್ರಶ್ನೆಗಳನ್ನು ಮಾತ್ರ ಮಂಡಿಸಬಹುದು. ದಯವಿಟ್ಟು ತಾವುಗಳೆಲ್ಲರೂ ಅರ್ಥ ಮಾಡಿಕೊಳ್ಳಬೇಕು.

ಶ್ರೀ ಕೆ. ಶ್ರೀನಿವಾಸಗೌಡ : ಮಾನ್ಯ ಅಧ್ಯಕ್ಷರೇ, ಮಾನ್ಯ ಗ್ರಾಮೀಣಾಭಿವೃದ್ಧಿ ಸಚಿವರು ರಾಜೀವ್‌ಗಾಂಧಿ ಫೌಂಡೇಶನ್‌ನ ಯೋಜನೆಯಡಿಯಲ್ಲಿ ಗ್ರಾಮಾಂತರ ಪ್ರದೇಶಗಳಿಗೆ ಕುಡಿಯುವ ನೀರಿನ ಪೂರೈಕೆಯ ಯೋಜನೆಯ ವಿಚಾರವನ್ನು ಹೇಳಿದ್ದಾರೆ. ಹಿಂದೆ ವಿಶ್ವಬ್ಯಾಂಕ್‌ನ ನೆರವಿನಿಂದ ಗ್ರಾಮೀಣಾಭಿವೃದ್ಧಿ ಇಲಾಖೆಯವರು ಇಂಥ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿರುವುದು ನಮಗೆ ತಿಳಿದು ಬಂದಿರುವ ವಿಚಾರವಾಗಿದೆ. ಆ ಯೋಜನೆಯಲ್ಲಿ ಕೂಡ ಎಲ್ಲಾ ಗ್ರಾಮಸ್ಥರುಗಳನ್ನು ಇನ್‌ವಾಲ್ವ್ ಮಾಡಿಕೊಂಡಿರುವುದು ತಮಗೆಲ್ಲರಿಗೂ ಗೊತ್ತಿದೆ. ಹೀಗೆ ಗ್ರಾಮಸ್ಥರನ್ನು ಇನ್‌ವಾಲ್ವ್ ಮಾಡಿಕೊಂಡು ಅವರು ತಮ್ಮ ಪಾಲಿನ ವಂತಿಗೆಯನ್ನು ಕಟ್ಟಿದ್ದರೂ ಕೂಡ ಈ ಒಂದು ವಾಟರ್ ಸಪ್ಲೈ ಸ್ಕೀಮ್‌ನ್ನು ಇಲಾಖೆಯವರು ಪೂರ್ಣ ಮಾಡಿರತಕ್ಕಂಥದ್ದನ್ನು ಬಹುತೇಕವಾಗಿ ಕಾಣುತ್ತಿದ್ದೇವೆ. ಆದರೆ ಗ್ರಾಮನೈರ್ಮಲ್ಯ ಅಂದರೆ ಡ್ರೈನೇಜ್ ಸಿಸ್ಟಂ ಇರಬಹುದು, ನೈರ್ಮಲ್ಯ ಇರಬಹುದು, ಧೋಬಿ ಘಾಟ್ ಇರಬಹುದು, ಇಂಥವಕ್ಕೆ ಯಾವುದೇ ಪ್ರಾಮುಖ್ಯತೆ ಕೊಟ್ಟಂತಿಲ್ಲ.

ಅಧ್ಯಕ್ಷರು : ನೀವು ಇನ್‌ಫರ್ಮೇಶನ್ಸ್‌ನ್ನು ಎಲಿಸಿಟ್ ಮಾಡಿ. ಭಾಷಣ ಮಾಡಬೇಡಿ ನಿಮ್ಮ ಭಾಷಣಕ್ಕೆ ಅವರು ಉತ್ತರ ಕೊಡಬೇಕಾಗುತ್ತದೆ. ಆದಕಾರಣ ದಯಮಾಡಿ ವಿಷಯದ ಮೇಲೆ ಪ್ರಸ್ತಾಪಿಸಿ.

ಶ್ರೀ ಕೆ. ಶ್ರೀನಿವಾಸಗೌಡ : ಜನರು ವಂತಿಗೆ ಕೊಟ್ಟಿದರೂ ಕೂಡ ವಿಶ್ವಬ್ಯಾಂಕ್ ಯೋಜನೆಯಡಿಯಲ್ಲಿ ಕಾರ್ಯಕ್ರಮ ಪೂರ್ಣಗೊಂಡಿಲ್ಲ. ಈಗ ಈ ಕಾರ್ಯಕ್ರಮದಲ್ಲಿಯೂ ಕೂಡ ಗ್ರಾಮಸ್ಥರನ್ನು ಇನ್‌ವಾಲ್ವ್ ಮಾಡಿದ್ದೀರಿ. ಅವರು 10 ಪರ್‌ಸೆಂಟ್‌ನಷ್ಟು ಹಣವನ್ನು ಕಟ್ಟಬೇಕೆಂದು ಹೇಳಿದ್ದೀರಿ. ಆದ್ದರಿಂದ, ಹಿಂದೆ ಗ್ರಾಮಸ್ಥರು ಯಾವ ವಂತಿಗೆಯನ್ನು ಕಟ್ಟಿದ್ದರು ಅದನ್ನು ಪೂರ್ಣಮಾಡಲು ಅವಕಾಶ ಕೊಟ್ಟರೆ ಮುಂದೆಯೂ ಕೂಡ ಗ್ರಾಮಸ್ಥರು ಈ ಕಾರ್ಯಕ್ರಮಕ್ಕೆ ವಂತಿಗೆ ಕೊಡಲು ಮುಂದೆ ಬರುತ್ತಾರೆ ಎಂದು ಹೇಳಬಯಸುತ್ತೇನೆ.

ಶ್ರೀ ಎಂ.ವೈ. ಘೋರ್ಪಡೆ : ಮಾನ್ಯ ಅಧ್ಯಕ್ಷರೆ, ಮೂರು ತಿಂಗಳಲ್ಲಿ ಪ್ರತಿಯೊಂದು ಗ್ರಾಮಪಂಚಾಯತಿಗೆ ಹೋಗಿ ಅಲ್ಲಿನ ಗುಣಮಟ್ಟ ಮತ್ತು ಈಲ್ಡ್ ಅವೇಲಬಿಲಿಟಿಯನ್ನು ನೋಡಲು ಅಧಿಕಾರಿಗಳಿಗೆ ಹೇಳಿದ್ದೇವೆ. ಆ ಕೆಲಸವನ್ನು ಅವರು ಮಾಡುತ್ತಿದ್ದಾರೋ ಇಲ್ಲವೋ ಎಂಬುದನ್ನು ನಾವು ನೋಡಬೇಕೆ? ಅಥವಾ ಬೇಡವೆ ? ಅವರ ಮೇಲೆಯೇ ನಾವು ಬಿಟ್ಟುಬಿಟ್ಟರೆ ಯಾವುದೋ ಒಂದು ಕಾರಣವನ್ನು ಅವರು ಹೇಳಬಹುದು. ಅದಕ್ಕಾಗಿ ಈ ಪ್ರಶ್ನೆ ಮತ್ತು ಸಭೆಯಲ್ಲಿನ ಅವಕಾಶವನ್ನು ಉಪಯೋಗಿಸಿ ಸ್ಪಷ್ಟವಾಗಿ ಹೇಳುತ್ತೇನೆ. ಸಿಇಒ, ಸಂಬಂಧಪಟ್ಟ ಅಧಿಕಾರಸ್ಥರು ಮತ್ತು ಜನಪ್ರತಿನಿಧಿಗಳು ಜಿಲ್ಲಾ ಮಟ್ಟದಲ್ಲಾಗಲೀ, ತಾಲ್ಲೂಕು ಮಟ್ಟದಲ್ಲಾಗಲೀ, ಯಾವ ಮಟ್ಟದಲ್ಲೇ ಆಗಲಿ, ಪ್ರತಿಯೊಂದು

ಗ್ರಾಮಕ್ಕೂ ಹೋಗಿ ಅಲ್ಲಿ ಗುಣಮಟ್ಟ ಹೇಗಿದೆ? ಹಿಂದೆ ಏನಾಗಿದೆ, ಮೂರು ವರ್ಷಗಳಲ್ಲಿ ಏನು ಎಂಬ ಬಗ್ಗೆ ಒಂದು ತೀರ್ಮಾನಕ್ಕೆ ಬಂದರೆ ಅದೆಲ್ಲವನ್ನೂ ಮಾಡುವ ಹಣಕಾಸಿನ ಶಕ್ತಿಯನ್ನು ನಾವು ನೇರವಾಗಿ ಕೊಟ್ಟಿದ್ದೇವೆ.

ಶ್ರೀ ಸಿ. ಭೈರೇಗೌಡ : ಮಾನ್ಯ ಅಧ್ಯಕ್ಷರೇ, ಮಾನ್ಯ ಸಚಿವರ ಉತ್ತರ ಪ್ರಶ್ನೆಗೆ ಸರಿಯಾಗಿ ಇಲ್ಲ. ಶೇಕಡಾ ಹತ್ತರಷ್ಟು ಪಂತಿಗೆ ರೂಪದಲ್ಲಿ ಸ್ಥಳೀಯರಿಂದ ಬರಬೇಕೆಂದು ಹೇಳುತ್ತಾ ಇದ್ದೀರಿ, ವಿಶ್ವಬ್ಯಾಂಕ್ ಯೋಜನೆಯಲ್ಲಿ ಇಂಥಾದ್ದೇ ಒಂದು ಪ್ರಸ್ತಾವನೆ ಇತ್ತು, ಅದು ಸರಿಯಾಗಿ ಕಾರ್ಯಗತವಾಗಲಿಲ್ಲ, ಇದರಲ್ಲಿಯೂ ಕೂಡ ಅದೇ ನಿಬಂಧನೆಯನ್ನು ತಾವುಗಳು ಹಾಕಿದ್ದೀರಿ, ಇಲ್ಲಿ ಲೋಕಲ್ ಪಾರ್ಟಿಸಿಪೇಶನ್ ಕಷ್ಟ ಇದೆ ಎಂದು ಅವರು ಹೇಳುತ್ತಿದ್ದಾರೆ. ಅದರಿಂದಾಗಿ ಕಾರ್ಯಕ್ರಮ ವಿಫಲವಾಗುತ್ತದೆ ಎಂಬುದು ಅವರ ಅನುಮಾನ. ದಯಮಾಡಿ ಅದಕ್ಕೆ ಉತ್ತರ ಕೊಡಿ.

ಶ್ರೀ ಎಂ.ವೈ. ಘೋರ್ಪಡೆ : ಮಾನ್ಯ ಅಧ್ಯಕ್ಷರೆ, ವರ್ಲ್ಡ್‌ಬ್ಯಾಂಕ್‌ನ ಬಗ್ಗೆ ಚರ್ಚೆ ಮಾಡುವುದಾದರೆ ವಿಶೇಷತಃ ಅದರ ಅನುಭವದ ಆಧಾರದ ಮೇಲೆಯೇ ನಾವು ಹೊಸ ಕಾರ್ಯಕ್ರಮವನ್ನು ಮಾಡಿದ್ದೇವೆ. ಹಿಂದೆ ಆದ ತಪ್ಪುಗಳು ಮತ್ತೆ ಆಗಬಾರದೆಂಬುದು ಉದ್ದೇಶ. ವರ್ಲ್ಡ್‌ಬ್ಯಾಂಕ್ ಆಗಲೀ , ಕೇಂದ್ರ ಸರಕಾರವಾಗಲೀ, ರಾಜ್ಯ ಸರಕಾರವಾಗಲೀ, ಹಿಂದೆ ವರ್ಲ್ಡ್‌ಬ್ಯಾಂಕ್ ಯೋಜನೆಯಲ್ಲಿ ಏನೇನು ತಪ್ಪಾಯ್ತು ಎಂದು ಬೇರೆ ಪ್ರಶ್ನೆ ಕೇಳಿದರೆ ಉತ್ತರಿಸುತ್ತೇನೆ. ಈ ವಿಚಾರವು ಇದಕ್ಕೆ ಸಂಬಂಧಪಟ್ಟದ್ದು ಅಲ್ಲ.

ಶ್ರೀ ಎ. ರಾಮದಾಸ್ : ಕೇಂದ್ರ ಸರಕಾರದಿಂದ ಇದಕ್ಕಾಗಿ ಯಾವಾಗ ಹಣ ಬಂತು. ಬಂದಂಥ ಹಣವನ್ನು ಬ್ಯಾಂಕ್‌ಗಳಲ್ಲಿ ಎಷ್ಟು ದಿವಸಗಳಿಂದ ಎಷ್ಟು ಬಡ್ಡಿಗೆ ಡೆಪಾಸಿಟ್ ಇಟ್ಟಿದ್ದೀರಿ? ಹಣ ಬಂದನಂತರ ತಾವುಗಳು ಹೇಳಿದ ಹಾಗೆ ಮೂರು ತಿಂಗಳೊಳಗಾಗಿ ಈ ಸರ್ವೇ ಕಾರ್ಯವು ಮುಗಿಯಬೇಕಾಗಿತ್ತು. ಸರ್ವೆ ಕೆಲಸವು ಎಲ್ಲೆಲ್ಲಿ ಆಗಿಲ್ಲ? ಯಾರು ಮಾಡಿಲ್ಲ? ಮಾಡದಿದ್ದವರ ಬಗ್ಗೆ ಏನು ಕ್ರಮವನ್ನು ನೀವು ತೆಗೆದುಕೊಂಡಿದ್ದೀರಿ ? ಈ ವಿಚಾರಗಳನ್ನು ತಾವುಗಳು ಹೇಳಬೇಕೆಂದು ಕೇಳಬಯಸುತ್ತೇನೆ.

ಶ್ರೀ ಎಂ.ವೈ. ಘೋರ್ಪಡೆ : ಹಣ ರಿಲೀಸ್ ಆಗಿದೆ. ಮೈಸೂರಿನಲ್ಲಿ 11.22 ಕೋಟಿ ರಿಲೀಸ್ ಆಗಿದೆ. ಅದು ಇತ್ತೀಚೆಗೆ ರಿಲೀಸ್ ಆಗಿದೆ. ಖಚಿತವಾಗಿ ಹೇಳಬೇಕೆಂದರೆ ನನ್ನ ಹತ್ತಿರ ಫೈಲ್ ಇಲ್ಲ. ಪ್ರತ್ಯೇಕವಾಗಿ ಕೇಳಿದರೆ ವಿವರಗಳನ್ನು ಒದಗಿಸುತ್ತೇನೆ.

ಅಧ್ಯಕ್ಷರು : ಮಾನ್ಯ ಸದಸ್ಯರುಗಳು ಜಿಲ್ಲಾ ಪರಿಷತ್‌ನಲ್ಲಿ ಸದಸ್ಯರಾಗಿರುತ್ತೀರಿ. ಅಲ್ಲಿ ಕೂಡ ಈ ವಿಚಾರವನ್ನು ಕೇಳಬಹುದಾಗಿತ್ತು. ಮಾನ್ಯ ಬಸವರಾಜ್‌ರವರು ತಮ್ಮ ಜಿಲ್ಲಾ ಪರಿಷತ್‌ನಲ್ಲಿ ಪ್ರಶ್ನೆ ಮಾಡಿದ್ದೀರಾ? ಕೆಲವು ಕಡೆಗಳಲ್ಲಿ ಅಧಿಕಾರಿಗಳು ಬಡ್ಡಿ ಬರಲಿ ಎಂದು ಬ್ಯಾಂಕ್‌ಗಳಲ್ಲಿ ಡಿಪಾಸಿಟ್ ಮಾಡುತ್ತಾರೆ. ಅದನ್ನು ಮಾನ್ಯ ಸಚಿವರು ತಪ್ಪಿಸಬೇಕು.

SRI H.C. BASAVARAJU : Rs.40 crore is lying in the Zilla Panchayat from the last six months without utilization.

MR. SPEAKER : The Minister will take necessary appropriate action. Don't worry.

ಶ್ರೀ ಎ. ರಾಮದಾಸ್ : ಮಾನ್ಯ ಅಧ್ಯಕ್ಷರೆ, ಇದು ಜನರಿಗೆ ಕುಡಿಯುವ ನೀರಿನ ಸಮಸ್ಯೆಯಾದುದರಿಂದ ಗಂಭೀರವಾಗಿ ಪರಿಗಣಿಸಬೇಕು. ಬಂದ ಹಣವನ್ನು ಯಾವತ್ತಿನಿಂದ ಡೆಪಾಸಿಟ್ ಮಾಡಿದ್ದಾರೆಂಬುದನ್ನು ಹೇಳಬಹುದಲ್ಲವೆ?

MR. SPEAKER : He will take appropriate action against them. ನೀವು ಒಮ್ಮಿಂದೊಮ್ಮೆಗೆ ಪ್ರಶ್ನೆಗಳನ್ನು ಕೇಳಿದರೆ ಸಚಿವರು ಉತ್ತರಿಸಲು ಆಗುವುದಿಲ್ಲ. ಪ್ರತ್ಯೇಕವಾದ ಪ್ರಶ್ನೆಗಳನ್ನು ಕೇಳಿ ವಿವರಗಳನ್ನು ಕೊಡುತ್ತಾರೆ. ಇಲ್ಲಿ ಪ್ರಶ್ನೆ ಹಾಕಿದವರು ಬಸವರಾಜ್‌ರವರು. ನಿಮಗೆ ವಿವರಗಳು ಬೇಕಾದರೆ ಪ್ರತ್ಯೇಕವಾದ ಪ್ರಶ್ನೆಯನ್ನು ಹಾಕಿ. ಸಚಿವರ ಹತ್ತಿರ ದಿನಾಂಕ ಇತ್ಯಾದಿ ವಿವರಗಳು ಸದ್ಯಕ್ಕೆ ಇರುವುದಿಲ್ಲ. ಇದ್ದಿದ್ದರೆ ಹೇಳುತ್ತಿದ್ದರು. Please put a seperate question. If Mr.Basavaraj sends a seperate notice to take it up under Half-an-hour discussion, we will take it up. ಮಾನ್ಯ ಸಚಿವರು ಯಾವ ದಿನಾಂಕದಂದು ಬ್ಯಾಂಕ್‌ನಲ್ಲಿ ಡೆಪಾಸಿಟ್ ಮಾಡಿದ್ದಾರೆಂಬ ಬಗ್ಗೆ ಸಾಯಂಕಾಲದೊಳಗಾಗಿ ಹೇಳಿ.

ಬಸವಕಲ್ಯಾಣದಲ್ಲಿ 100 ಹಾಸಿಗೆವುಳ್ಳ ಸರ್ಕಾರಿ ಆಸ್ಪತ್ರೆಯನ್ನು ತೆರೆಯುವುದು

410 - ಶ್ರೀ ಎಂ.ಜಿ.ಮುಳೆ (ಬಸವಕಲ್ಯಾಣ) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಬಸವಕಲ್ಯಾಣ ಪಟ್ಟಣವು ಬೀದರ್ ಜಿಲ್ಲೆಯಲ್ಲಿ ಬೀದರಿನ ನಂತರ ಎರಡನೇ ದೊಡ್ಡ ಪಟ್ಟಣವಾಗಿರುವುದು ನಿಜವಲ್ಲವೇ? ಈಗ ಬಸವಕಲ್ಯಾಣ ಪಟ್ಟಣದಲ್ಲಿ ಹಾಲಿ ಇರುವ ಸರ್ಕಾರಿ ಆಸ್ಪತ್ರೆಯ ಹಾಸಿಗೆಗಳ ಸಂಖ್ಯೆ ಎಷ್ಟು?*

ಆ) *ಬಸವಕಲ್ಯಾಣ ಪಟ್ಟಣದಲ್ಲಿ 100 ಹಾಸಿಗೆ ಆಸ್ಪತ್ರೆಯನ್ನು ತೆರೆಯುವ ಉದ್ದೇಶ ಸರ್ಕಾರಕ್ಕಿದೆಯೇ? ಹಾಗಿದ್ದಲ್ಲಿ ಯಾವಾಗ ಪ್ರಾರಂಭಿಸಲಾಗುವುದು?*

ಇ) *100 ಹಾಸಿಗೆಯ ಆಸ್ಪತ್ರೆಯನ್ನು ಸ್ಥಾಪಿಸಲು ಸರ್ಕಾರದಲ್ಲಿ ಇದ್ದ ಮಾನದಂಡವೇನು? ಬೀದರ ಜಿಲ್ಲೆಯ ಭಾಲ್ಕಿ ಮತ್ತು ಹುಮನಾಬಾದಿನಲ್ಲಿ 100 ಹಾಸಿಗೆಗಳ ಆಸ್ಪತ್ರೆ ತೆರೆಯಲು ಸರ್ಕಾರ ಹಾಕಿಕೊಂಡ ಮಾನದಂಡ ಯಾವುದು?*

ಡಾ|| ಎ.ಬಿ. ಮಾಲಕರೆಡ್ಡಿ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) :

ಅ) ಹೌದು, ಬಸವಕಲ್ಯಾಣ ಪಟ್ಟಣದಲ್ಲಿ ಹಾಲಿ ಇರುವ ಸರಕಾರಿ ಆಸ್ಪತ್ರೆಯ ಹಾಸಿಗೆ ಸಂಖ್ಯೆಯು 30 ಆಗಿರುತ್ತದೆ.